SG – 431

32

VI Semester B.Com. Examination, September/October 2021
(CBCS – (F+R) – 2017 – 18 and Onwards)
COMMERCE
Paper – 6.5 : Business Taxation (Elective Paper – III)

Time : 3 Hours Max. Marks : 70

***Instruction** : Answers should be written either in **English** or in **Kannada**.*

SECTION – A
ವಿಭಾಗ – ಎ

Answer **any five** sub-questions. **Each** sub-question carries **two** marks. **(5×2=10)**
ಯಾವುದಾದರೂ **ಐದು** ಉಪ-ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಉಪ-ಪ್ರಶ್ನೆಗೆ **ಎರಡು** ಅಂಕಗಳು.

St Claret College LIBRARY Bangalore-560013

1. a) What is customs duty ?
   ಆಮದು ಸುಂಕ ಎಂದರೇನು ?
   b) Define the term 'Customs Port'.
   'ಆಮದು ಬಂದರು' ಎಂಬ ಪದದ ವ್ಯಾಖ್ಯಾನ ಬರೆಯಿರಿ.
   c) What is meant by advance payment of tax ?
   ಮುಂಗಡ ತೆರಿಗೆ ಪಾವತಿ ಎಂದರೇನು ?
   d) What do you mean by Partnership Deed ?
   ಪಾಲುದಾರಿಕೆ ಪತ್ರ ಎಂದರೇನು ?
   e) Mention any two advantages of LLP.
   ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯ ಯಾವುದಾದರೂ ಎರಡು ಅನುಕೂಲಗಳನ್ನು ತಿಳಿಸಿ.
   f) What is a domestic company ?
   ದೇಶಿಯ ಕಂಪನಿ ಎಂದರೇನು ?
   g) Give the meaning of Additional Depreciation.
   ಹೆಚ್ಚುವರಿ ಸವಕಳಿಯ ಅರ್ಥವನ್ನು ನೀಡಿರಿ.

SECTION – B
ವಿಭಾಗ – ಬಿ

Answer **any three** questions. **Each** question carries **six** marks. **(3×6=18)**
ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **ಆರು** ಅಂಕಗಳು.

2. A machinery is imported by air in 2021.CIF of the machinery is 3000 UK pound. Frieght is 1,200 UK pound, Insurance cost 200 UK pound. Applicable rate of BCD is 10%, SWS is 10% on BCD and IGST is 18% .Exchange rate per UK pound is as follows :
   RBI floor rate = ₹ 102.55.
   Inter-bank closing rate = ₹ 102.80.
   Rate notified by CBEC = ₹ 103.50
   Rate at which bank realised the payment = ₹ 103.75.
   Compute the customs value and customs duty payable.
   ಒಂದು ಯಂತ್ರವನ್ನು 2021 ರಲ್ಲಿ ವಾಯುಮಾರ್ಗದ ಮೂಲಕ ಆಮದು ಮಾಡಿಕೊಳ್ಳಲಾಯಿತು. ಅದರ CIF ಮೌಲ್ಯವು 3000 UK ಪೌಂಡುಗಳಾಗಿದ್ದು, ಸಾಗಣೆ ವೆಚ್ಚ 1,200 UK ಪೌಂಡು, ವಿಮೆ ವೆಚ್ಚ 200 UK ಪೌಂಡುಗಳಾಗಿದೆ. ಆಮದು ಮೌಲ್ಯದ ಮೇಲೆ ಮೂಲ ಆಮದು ಸುಂಕ ಶೇ 10, ಸಾಮಾಜಿಕ ಕಲ್ಯಾಣ ಹೆಚ್ಚುವರಿ ಶುಲ್ಕ ಶೇ 10% ಆಮದು ಸುಂಕದ ಮೇಲೆ ಮತ್ತು IGST ಶೇ 18ರಷ್ಟು ಅನ್ವಯಿಸುತ್ತದೆ.
   ವಿದೇಶಿ ವಿನಿಮಯ ದರವು ಒಂದು UK ಪೌಂಡ್‌ಗೆ ಈ ಕೆಳಕಂಡಂತಿರುತ್ತದೆ.
   ಭಾರತೀಯ ರಿಜರ್ವ್ ಬ್ಯಾಂಕ್‌ನ ಮೂಲ ದರ = ರೂ 102.55.

P.T.O.

ಅಂತರ ಬ್ಯಾಂಕ್‌ಗಳ ಅಂತಿಮ ದರ = ರೂ 102.80.

CBEC ಯು ಅಧಿಸೂಚಿಸಿದ ದರ = ರೂ 103.50

ಬ್ಯಾಂಕ್ ಪಾವತಿಸಿದ ದರ = ರೂ 103.75

ಮೇಲಿನ ವಿವರಗಳಿಂದ ಯಂತ್ರೋಪಕರಣದ ಆಮದು ಮೌಲ್ಯ ಮತ್ತು ಆಮದು ಸುಂಕವನ್ನು ಕಂಡುಹಿಡಿಯಿರಿ.

3. The following are the estimated incomes of Shri Prahlad for the A.Y 2020– 21:
   1) Taxable income from house property ₹ 2,50,000.
   2) Taxable income from Business ₹ 7,50,000.
   3) Taxable income from other sources ₹ 80,000.

   Compute the advance payment tax.

   ಶ್ರೀ ಪ್ರಹ್ಲಾದ್ ರವರ 2020– 21 ನೇ ಕರ ನಿರ್ಧಾರಣಾ ವರ್ಷಕ್ಕೆ ಅಂದಾಜು ಮಾಡಲಾದ ತೆರಿಗೆಯ ಆದಾಯಗಳು ಈ ಕೆಳಕಂಡಂತಿವೆ.

   1) ಮನೆಯ ಸ್ವತ್ತಿನಿಂದ ಬಂದ ಆದಾಯ ರೂ 2,50,000.
   2) ವ್ಯವಹಾರದಿಂದ ಬಂದ ಆದಾಯ ರೂ 7,50,000.
   3) ಇತರೆ ಮೂಲಗಳಿಂದ ಬಂದ ಆದಾಯ ರೂ 80,000.

   ಪಾವತಿಸಬೇಕಾದ ಮುಂಗಡ ಆದಾಯ ತೆರಿಗೆಯನ್ನು ಕಂಡುಹಿಡಿಯಿರಿ.

4. Anu ,Manu and Sonu are partners of a firm with equal shares.The profit and loss account for the year ended 31-03-2020 shows a net profit of ₹ 1,50,000 ofter debiting the following as per deed.
   a) Salary to Anu ₹ 30,000 and Manu ₹ 22,500.
   b) Bonus to sonu ₹ 22,500.
   c) Interest on Capital to Anu ₹ 3,000 (in excess of the specified limit)
   d) ₹ 30,000 paid to the rent of the business premises.
   e) Commission of ₹ 7,500 was given to sonu.

   Compute the book profits of the firm assuming all the partners are working partners.

   ಅನು, ಮನು ಮತ್ತು ಸೋನುರವರು ಪಾಲುದಾರಿಕಾ ಸಂಸ್ಥೆಯ ಸಮ ಪಾಲುದಾರರಾಗಿರುತ್ತಾರೆ. ವರ್ಷಾಂತ್ಯ 31-03-2020 ರಂದು ಲಾಭ-ನಷ್ಟ ಖಾತೆಯು ಪಾಲುದಾರ ಪತ್ರದ ಪ್ರಕಾರ ಕೆಳಕಂಡ ವೆಚ್ಚಗಳನ್ನು ಪರಿಗಣಿಸಿದ ನಂತರ ನಿವ್ವಳ ಲಾಭ ₹ 1,50,000 ಎಂದು ತೋರಿಸುತ್ತಿದೆ.

   a) ಅನುರವರಿಗೆ ಸಂಬಳ ರೂ.30,000 ಮತ್ತು ಮನುರವರಿಗೆ ರೂ. 22,500.
   b) ಸೋನುರವರಿಗೆ ಬೋನಸ್ ರೂ. 22,500.
   c) ಅನುರವರಿಗೆ ಬಂಡವಾಳದ ಮೇಲಿನ ಬಡ್ಡಿ(ನಿಗದಿತ ಮಿತಿ ಮೀರಿದೆ) ರೂ.3,000.
   d) ವ್ಯಾಪಾರದ ಆವರಣದ ಬಾಡಿಗೆ ರೂ. 30,000 ಪಾವತಿಸಿದೆ.
   e) ರೂ. 7,500 ಗಳ ಕಮೀಷನನ್ನು ಸೋನುಗೆ ನೀಡಲಾಗಿದೆ.

   ಎಲ್ಲಾ ಪಾಲುದಾರರು ಕಾರ್ಯನಿರ್ವಹಿಸುವ ಪಾಲುದಾರರು ಎಂದು ಭಾವಿಸಿಕೊಂಡು,ಪಾಲುದಾರಿಕೆ ಸಂಸ್ಥೆಯ ಪುಸ್ತಕ ಲಾಭವನ್ನು ಕಂಡುಹಿಡಿಯಿರಿ.

5. State whether the following are admissible or inadmissible under the provisions of Income Tax Act.
   i) Loss due to embezzlement by an employee ₹ 5,000.
   ii) Interest on loan taken to pay income tax ₹ 15,000.
   iii) Annual listing fees paid towards stock exchange by a company ₹ 12,000.
   iv) Legal expenses to defend an existing title to a capital asset ₹ 8,000.
   v) Provision for doubtful debts ₹ 13,000.
   vi) Loss on sale of capital assets ₹ 4,000.

   ಆದಾಯ ತೆರಿಗೆಯ ಕಾಯ್ದೆಯ ಪ್ರಕಾರ ವ್ಯವಹಾರದಿಂದ ಬರುವ ಆದಾಯವನ್ನು ಕಂಡುಹಿಡಿಯುವಾಗ ಈ ಕೆಳಗಿನ ಪಾವತಿಗಳು ಸಮ್ಮತಿ ಅಥವಾ ಅಸಮ್ಮತಿ ಖರ್ಚುಗಳೇ ಎಂಬುದನ್ನು ತಿಳಿಸಿ.
   i) ಉದ್ಯೋಗಿಯಿಂದ ದುರುಪಯೋಗದಿಂದ ಆದ ನಷ್ಟ ರೂ. 5,000.
   ii) ಆದಾಯ ತೆರಿಗೆಯನ್ನು ಕಟ್ಟಲು ತೆಗೆದುಕೊಂಡ ಸಾಲದ ಮೇಲಿನ ಬಡ್ಡಿಯ ಪಾವತಿ ರೂ.15,000.
   iii) ಷೇರು ಮಾರುಕಟ್ಟೆಯಲ್ಲಿ ಕಂಪನಿಯ ಷೇರುಗಳ ನೋಂದಣಿಗೆ ಪಾವತಿಸಿದ ವಾರ್ಷಿಕ ಶುಲ್ಕಗಳು ರೂ.12,000.
   iv) ಬಂಡವಾಳದ ಆಸ್ತಿಯ ಪ್ರಸ್ತುತ ಹಕ್ಕನ್ನು ರಕ್ಷಿಸಲು ಪಾವತಿಸಿದ ಕಾನೂನು ವೆಚ್ಚಗಳು ರೂ 8,000.
   v) ಅನುಮಾನಾಸ್ಪದ ಕರಡು ಸಾಲಗಳಿಗೆ ಮೀಸಲಿಟ್ಟ ಲಾಭಾಂಶದ ಹಣ ರೂ 13,000
   vi) ಬಂಡವಾಳದ ಆಸ್ತಿಯ ಮಾರಾಟದಿಂದ ಆದ ನಷ್ಟ ರೂ 4,000.

6. SMS Auto Ltd. is engaged in manufacture of Auto spare parts and submits the following information relating to acquisition of assets during P.Y. 2019 – 20 :

	Block I P & M	**Block II P & M**	**Block III P & M**
Rate of depreciation	15%	20%	15%
WDV on 1-4-2019	10,00,000	16,00,000	8,00,000
Additions to plants made during the P.Y. 2019-20	25,00,000	14,00,000	12,00,000
Date of acquisition and put to use	June 2019	June 2019	Jan. 2020
Sale of plant during the P.Y. 2019 – 20	8,00,000	10,75,000	6,50,000

Compute the permissible amount of normal depreciation and additional depreciation for the A.Y. 2020 – 21.

ಎಸ್.ಎಂ.ಎಸ್. ಆಟೋ ಲಿ., ಆಟೋ ಬಿಡಿ ಭಾಗಗಳ ಉತ್ಪಾದನಾ ವ್ಯವಹಾರದಲ್ಲಿ ತೊಡಗಿದ್ದು, ಹಿಂದಿನ ವರ್ಷ 2019 – 20ಕ್ಕೆ ಸಂಬಂಧಿಸಿದ ಆಸ್ತಿಗಳ ಖರೀದಿಯ ವಿವರಗಳನ್ನು ಈ ಕೆಳಕಂಡಂತೆ ನೀಡಿದೆ.

	ಬ್ಲಾಕ್ – I P & M	**ಬ್ಲಾಕ್ – II P & M**	**ಬ್ಲಾಕ್ – III P & M**
ಸವಕಳಿಯ ದರ	15%	20%	15%
ಸವಕಳಿ ನಂತರ ಬೆಲೆ 1-4-2019	10,00,000	16,00,000	8,00,000
ಹಿಂದಿನ ವರ್ಷ 2019-20 ರಲ್ಲಿ ಹೊಸದಾಗಿ ಸೇರ್ಪಡೆ ಮಾಡಲಾದ ಯಂತ್ರೋಪಕರಣಗಳು	25,00,000	14,00,000	12,00,000
ಖರೀದಿ ಮತ್ತು ಉಪಯೋಗಿಸಲು ಪ್ರಾರಂಭಿಸಿದ ದಿನಾಂಕ	ಜೂನ್ 2019	ಜೂನ್ 2019	ಜನವರಿ 2020
ಹಿಂದಿನ 2019 – 20 ರಲ್ಲಿ ಮಾರಾಟ ಮಾಡಲಾದ ಯಂತ್ರೋಪಕರಣಗಳು	8,00,000	10,75,000	6,50,000

ಕರ ನಿರ್ಧರಣಾ ವರ್ಷ 2020 – 21ಕ್ಕೆ ಸಂಬಂಧಿಸಿದ ಸಾಧಾರಣ ಸವಕಳಿ ಮತ್ತು ಹೆಚ್ಚುವರಿ ಸವಕಳಿಯನ್ನು ಕಂಡುಹಿಡಿಯಿರಿ.

SECTION – C

ವಿಭಾಗ – ಸಿ

Answer **any three** questions. **Each** question carries **fourteen** marks. **(3×14=42)**

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಹದಿನಾಲ್ಕು** ಅಂಕಗಳು.

7. Aashirvad India Ltd., imported a machinery by air from Switzerland. Bill of entry is presented on 25-03-2021; However, entry inward is granted on 10-04-2021. The importer has furnished the following details :

CIF of the machine	50,000 Swiss Franc
Air frieght	5,000 Swiss Franc
Insurance charges	2,500 Swiss Franc
Design and engineering charges	2,000 Swiss Franc
Special packing charges	1,000 Swiss Franc
Commission paid to local agent	₹ 25,000
Transport cost from Indian airport to factory	₹ 10,000
Basic customs duty	10%
SWS payable	10% on BCD
IGST payable	18%

Exchange rates : Swiss Franc to Indian rupees announced :

	On 25-03-2021	**on 10-4-2021**
By RBI	₹ 82.20	₹ 82.10
By CBEC	₹ 82.25	₹ 82.35

Compute the assessable value and customs duty payable.

ಆಶೀರ್ವಾದ್ ಇಂಡಿಯಾ ಲಿ., ಸ್ವಿಜರ್‌ಲ್ಯಾಂಡ್‌ನಿಂದ ವಾಯುಮಾರ್ಗದ ಮೂಲಕ ಒಂದು ಯಂತ್ರೋಪಕರಣವನ್ನು ಆಮದು ಮಾಡಿಕೊಂಡಿದೆ. ದಿನಾಂಕ 25-03-2021 ರಂದು ಪ್ರವೇಶ ಪತ್ರವನ್ನು ಪ್ರಸ್ತುತಪಡಿಸಿದ್ದರೂ ಸಹ ಒಳ ಪ್ರವೇಶದ ಅನುಮತಿಯನ್ನು ದಿನಾಂಕ : 10-04-2021 ರಂದು ನೀಡಲಾಗಿದೆ, ಆಮದುದಾರನು ಈ ಕೆಳಕಂಡ ವಿವರಗಳನ್ನು ನೀಡಿದ್ದಾನೆ :

ಯಂತ್ರೋಪಕರಣದ CIF ಮೌಲ್ಯ	50,000 ಸ್ವಿಸ್ ಫ್ರಾಂಕ್
ವಾಯುಮಾರ್ಗ ಪ್ರಯಾಣ ವೆಚ್ಚ	5,000 ಸ್ವಿಸ್ ಫ್ರಾಂಕ್
ವಿಮಾ ವೆಚ್ಚಗಳು	2,500 ಸ್ವಿಸ್ ಫ್ರಾಂಕ್
ವಿನ್ಯಾಸ ಮತ್ತು ಇಂಜಿನಿಯರಿಂಗ್ ವೆಚ್ಚಗಳು	2,000 ಸ್ವಿಸ್ ಫ್ರಾಂಕ್
ವಿಶೇಷ ಪ್ಯಾಕಿಂಗ್ ವೆಚ್ಚಗಳು	1,000 ಸ್ವಿಸ್ ಫ್ರಾಂಕ್
ಸ್ಥಳೀಯ ಏಜೆಂಟ್‌ನಿಗೆ ನೀಡಿದ ದಲ್ಲಾಳಿ	ರೂ. 25,000
ಭಾರತೀಯ ವಿಮಾನ ನಿಲ್ದಾಣದಿಂದ ಫ್ಯಾಕ್ಟರಿಗೆ ಯಂತ್ರೋಪಕರಣ ಸಾಗಣೆ ವೆಚ್ಚ	ರೂ. 10,000
ಮೂಲ ಆಮದು ಸುಂಕ	ಶೇ. 10
ಸಾಮಾಜಿಕ ಕಲ್ಯಾಣ ಹೆಚ್ಚುವರಿ ಶುಲ್ಕ (ಮೂಲ ಆಮದು ಸುಂಕದ ಮೇಲೆ)	ಶೇ. 10
IGST	ಶೇ. 18

ವಿನಿಮಯ ದರಗಳು : ಸ್ವಿಸ್ ಫ್ರಾಂಕ್‌ನಿಂದ ಭಾರತೀಯ ರೂಪಾಯಿಗೆ ಘೋಷಣೆ :

	25-03-2021ಕ್ಕೆ	**on 10-4-2021ಕ್ಕೆ**
ಆರ್‌ಬಿಐ ನಿಂದ	₹ 82.20	₹ 82.10
ಸಿಬಿಇಸಿ ಯಿಂದ	₹ 82.25	₹ 82.35

ತೆರಿಗೆಗೊಳಪಡಿಸಬಹುದಾದ ಮೌಲ್ಯ ಮತ್ತು ಆಮದು ಸುಂಕವನ್ನು ಕಂಡುಹಿಡಿಯಿರಿ.

8. From the following details of incomes, compute TDS amount for each transaction :
   a) Dividends from the listed company ₹ 1,00,000.
   b) Winnings from the lottery ₹ 2,50,000.
   c) Commission received by LIC agent ₹ 50,000.
   d) Compensation received for acquisition of land ₹ 5,00,000.
   e) Withdrawal from employee provident fund without furnishing PAN ₹ 50,000.
   f) Rent paid on building ₹ 80,000 p.m.
   g) Advanced received for sale of building ₹ 20,00,000 (sale value ₹ 50,00,000).

   ಈ ಕೆಳಕಂಡ ವಿವರಗಳಿಂದ TDS ಮೊತ್ತವನ್ನು ಪ್ರತಿ ವಹಿವಾಟಿಗೆ ಕಂಡುಹಿಡಿಯಿರಿ.
   a) ನೋಂದಾಯಿತ ಕಂಪನಿಯಿಂದ ಪಡೆದ ಲಾಭಾಂಶ ರೂ. 1,00,000.
   b) ಲಾಟರಿ ಗೆಲುವು ಮೊತ್ತ ರೂ. 2,50,000.
   c) LIC ಏಜೆಂಟ್‌ನ ಕಮೀಷನ್ ಗಳಿಕೆ ರೂ. 50,000.
   d) ಭೂ ಸ್ವಾಧೀನಕ್ಕಾಗಿ ಪಡೆದ ಪರಿಹಾರದ ಮೊತ್ತ ರೂ. 5,00,000.
   e) PAN ಪ್ರಸ್ತುತ ಪಡಿಸದೆ ನೌಕರನ ಭವಿಷ್ಯ ನಿಧಿಯಿಂದ ತೆಗೆದ ಹಣ ರೂ. 50,000.
   f) ಕಟ್ಟಡ ಬಾಡಿಗೆ ಪಾವತಿ ಪ್ರತಿ ತಿಂಗಳಿಗೆ ರೂ. 80,000.
   g) ಕಟ್ಟಡ ಮಾರಾಟಕ್ಕೆ ಪಡೆದ ಮುಂಗಡ ಹಣ ರೂ. 20,00,000. (ಮಾರಾಟದ ಮೌಲ್ಯ ರೂ. 50,00,000).

9. X, Y and Z are partners sharing profits and losses equally in a firm. During the year 2019 – 20, the firm incurs a net loss of 15,00,000 after deducting the following :
   a) Commission to X ₹ 1,00,000.
   b) Bonus to Y and Z ₹ 2,00,000 each.
   c) Salary to X, Y and Z ₹ 4,00,000 each.
   d) Donation to PM's National Relief Fund ₹ 2,00,000.
   e) Income tax ₹ 1,00,000.
   f) Sales tax ₹ 2,50,000.
   g) Office rent ₹ 2,50,000.
   h) Depreciation on assets ₹ 10,00,000 (Allowable depreciation as per IT Law is ₹ 12,00,000).
   i) Interest on Capital calculated at 20%.
      X – ₹ 1,60,000
      Y – ₹ 1,40,000
      Z – ₹ 1,80,000

      The Profit and Loss Account also included the following :
      i) Long-term capital gain ₹ 2,25,000.
      ii) Short-term capital gain ₹ 1,75,000.
      iii) Export earnings ₹ 9,50,000.

      Compute the book profit of the firm and its taxable income for the A.Y. 2020 – 21.

X, Y ಮತ್ತು Z ಪಾಲುದಾರರು, ಒಂದು ಸಂಸ್ಥೆಯ ಲಾಭ-ನಷ್ಟಗಳನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದಾರೆ. ಪ್ರಸಕ್ತ 2019 – 20ನೇ ವರ್ಷದಲ್ಲಿ, ಈ ಕೆಳಗೆ ನೀಡಲಾಗಿರುವುದನ್ನು ಸಂಸ್ಥೆಯ ಆದಾಯದಲ್ಲಿ ಕಳೆದ ನಂತರ, ಸಂಸ್ಥೆಗೆ ರೂ. 15,00,000 ನಷ್ಟವಾಗಿದೆ.

a) Xಗೆ ನೀಡಲಾದ ಕಮೀಷನ್ ಮೊತ್ತ ರೂ. 1,00,000.
b) Y ಮತ್ತು Zಗೆ ನೀಡಲಾದ ಬೋನಸ್ ತಲಾ ರೂ. 2,00,000.
c) X, Y ಮತ್ತು Zಗೆ ನೀಡಲಾದ ಸಂಬಳ ತಲಾ ರೂ. 4,00,000.
d) ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಗೆ ದೇಣಿಗೆ ರೂ. 2,00,000.
e) ಆದಾಯ ತೆರಿಗೆ ರೂ. 1,00,000.
f) ಮಾರಾಟ ತೆರಿಗೆ ರೂ. 2,50,000.
g) ಕಛೇರಿ ಬಾಡಿಗೆ ರೂ. 2,50,000.
h) ಆಸ್ತಿಗಳ ಮೇಲಿನ ಸವಕಳಿ ರೂ. 10,00,000 (ಆದಾಯ ತೆರಿಗೆ ಕಾನೂನಿನನ್ವಯ ಕಳೆಯಬಹುದಾದ ಸವಕಳಿಯ ಮೊತ್ತ ರೂ. 12,00,000).
i) ಪಾಲುದಾರರ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ 20%ರಂತೆ :
   X – ರೂ. 1,60,000
   Y – ರೂ. 1,40,000
   Z – ರೂ. 1,80,000

ಅಲ್ಲದೆ, ಈ ಕೆಳಕಂಡ ಆದಾಯಗಳನ್ನು ಕೂಡ ಪ್ರಸಕ್ತ ವರ್ಷದ ಲಾಭ-ನಷ್ಟದ ಖಾತೆಯಲ್ಲಿ ತೋರಿಸಲಾಗಿದೆ.

i) ದೀರ್ಘಕಾಲೀಕ ಬಂಡವಾಳ ಲಾಭ ರೂ. 2,25,000.
ii) ಅಲ್ಪಕಾಲಿಕ ಬಂಡವಾಳ ಲಾಭ ರೂ. 1,75,000.
iii) ರಫ್ತಿನಿಂದ ಗಳಿಸಿದ ಆದಾಯ ರೂ. 9,50,000.

ಈ ಎಲ್ಲಾ ವಿವರಗಳಿಂದ ಸಂಸ್ಥೆಯ ಆದಾಯ ತೆರಿಗೆಗೊಳಪಡಿಸಬಹುದಾದ ಲಾಭ ಮತ್ತು ಪುಸ್ತಕ ಲಾಭದ ಮೊತ್ತವನ್ನು ತೆರಿಗೆ ವರ್ಷ 2020 – 21ಕ್ಕೆ ಕಂಡುಹಿಡಿಯಿರಿ.

10. Compute the taxable income of M/S Shakti Ltd. for the previous year 2019 – 20 from the following information :

Profit and Loss Account

	₹		₹
To Salaries to staff	3,00,000	By Gross Profits	20,00,000
To Office expenses	80,000	By LTCG	60,000
To General expenses	80,000	By Interest on Govt. securities	20,000
To printing and stationery	20,000		
" Insurance on stock	1,00,000		
" Transfer to General Reserve	1,00,000		
" Provision for IT	8,40,000		
" Interest on Loan	1,60,000		
" Net profit	4,00,000		
	20,80,000		**20,80,000**

Additional Information :

1) The depreciation admissible under the Act is ₹ 60,000.
2) General expenses include ₹ 8,000 for office rent, ₹ 12,000 to bonus to staff and ₹ 4,000 for donation to NDF.

M/S ಶಕ್ತಿ ಕಂಪನಿಯ ಆರ್ಥಿಕ ವರ್ಷ 2019 – 20ರ ವಿವರಗಳಿಂದ ತೆರಿಗೆ ಆದಾಯವನ್ನು ಕಂಡುಹಿಡಿಯಿರಿ :

ಲಾಭ - ನಷ್ಟ ಖಾತೆ

	ರೂ.		ರೂ.
ನೌಕರರಿಗೆ ಸಂಬಳ	3,00,000	ಸ್ಥೂಲ ಲಾಭ	20,00,000
ಕಛೇರಿ ವೆಚ್ಚ	80,000	ದೀರ್ಘಾವಧಿ ಬಂಡವಾಳದ ಲಾಭ	60,000
ಸಾಮಾನ್ಯ ವೆಚ್ಚ	80,000	ಸರ್ಕಾರಿ ಸೆಕ್ಯೂರಿಟಿಗಳ ಮೇಲಿನ ಬಡ್ಡಿ	20,000
ಮುದ್ರಣ ಮತ್ತು ಲೇಖನ ವೆಚ್ಚ	20,000		
ದಾಸ್ತಾನು ಮೇಲೆ ವಿಮೆ	1,00,000		
ಸಾಮಾನ್ಯ ಮೀಸಲಿಗೆ ವರ್ಗಾವಣೆ	1,00,000		
ಆದಾಯ ತೆರಿಗೆಗೆ ತಾತ್ಕಾಲಿಕ ನಿಧಿ	8,40,000		
ಸಾಲದ ಮೇಲಿನ ಬಡ್ಡಿ	1,60,000		
ನಿವ್ವಳ ಲಾಭ	4,00,000		
	20,80,000		**20,80,000**

ಹೆಚ್ಚಿನ ಮಾಹಿತಿಗಳು :

1) ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಸಮ್ಮತಿ ಸವಕಳಿ ರೂ. 60,000.
2) ಸಾಮಾನ್ಯ ವೆಚ್ಚವು ರೂ. 8,000 ಕಛೇರಿ ಬಾಡಿಗೆ, ರೂ. 12,000 ನೌಕರರಿಗೆ ಬೋನಸ್ ಮತ್ತು ರೂ. 4,000 NDFಗೆ ದೇಣಿಗೆ ಒಳಗೊಂಡಿರುತ್ತದೆ.

11. Apex Ltd., a domestic company provides the following P&L Account for the year ending on 31-3-2020.

	₹		₹
Salaries	9,00,000	Gross profits	48,00,000
Directors remuneration	7,00,000	Dividends from Indian Co.,	1,60,000
General expenses	4,50,000	Interest on Investments	1,50,000
Sales expenses	2,10,000	Amount withdrawn from Revaluation Reserve	2,00,000
Provision for sales tax	50,000		
Income tax paid	2,00,000		
Excise penalty	30,000		
Provision for losses of subsidiary Co.,	1,25,000		
Proposed dividend	1,75,000		
Depreciation	4,00,000		
Transfer to Sinking Fund	1,00,000		
Net profits	19,70,000		
	53,10,000		**53,10,000**

Additional Information :

1) Depreciation as per Section 32 of the IT Act is ₹ 3,50,000.
2) Out of provision for sales tax ₹ 40,000 is paid during the P.Y. 2019 – 20.
3) Brought toward business losses and unabsorbed depreciation :

	As per IT Act ₹	As per Books of Accounts ₹
Brought forward business Losses	2,00,000	2,25,000
Unabsorbed depreciation	3,50,000	4,25,000

Compute :

1) Total Income tax liability as per normal provisions of IT Act.
2) Books profits and tax liability as per Section 115 JB.
3) Ultimate tax liability of the company.

ಅಪೆಕ್ ಲಿಮಿಟೆಡ್, ಒಂದು ದೇಶಿಯ ಕಂಪನಿ ಕೆಳಕಂಡ ಲಾಭ-ನಷ್ಟ ಖಾತೆಯನ್ನು 31-3-2020ಕ್ಕೆ ಅಂತಿಮಗೊಂಡಂತೆ ನೀಡಿದೆ.

	ರೂ.		ರೂ.
ಸಂಬಳ	9,00,000	ಸ್ಥೂಲ ಲಾಭ	48,00,000
ನಿರ್ದೇಶಕರ ಸಂಭಾವನೆ	7,00,000	ಭಾರತೀಯ ಕಂಪನಿಯು	
ಸಾಮಾನ್ಯ ವೆಚ್ಚಗಳು	4,50,000	ಪಡೆದ ಲಾಭಾಂಶ	1,60,000
ಮಾರಾಟ ವೆಚ್ಚಗಳು	2,10,000	ಹೂಡಿಕೆಗಳ ಮೇಲಿನ ಬಡ್ಡಿ	1,50,000
ಮಾರಾಟ ತೆರಿಗೆಗೆ ತಾತ್ಕಾಲಿಕ ನಿಧಿ	50,000	ಮರು ಮೌಲ್ಯಮಾಪನ ನಿಧಿಯಿಂದ	
ಆದಾಯ ತೆರಿಗೆ ಪಾವತಿ	2,00,000	ತೆಗೆದ ಹಣ	2,00,000
ಅಬಕಾರಿ ದಂಡ	30,000		
ಅಂಗಸಂಸ್ಥೆಯ ನಷ್ಟಗಳಿಗೆ ತಾತ್ಕಾಲಿಕ ನಿಧಿ	1,25,000		
ಪ್ರಸ್ತಾವಿತ ಲಾಭಾಂಶ	1,75,000		
ಸವಕಳಿ	4,00,000		
ಸಿಂಕಿಂಗ್ ಫಂಡ್‌ಗೆ ವರ್ಗಾವಣೆ	1,00,000		
ನಿವ್ವಳ ಲಾಭ	19,70,000		
	53,10,000		**53,10,000**

ಹೆಚ್ಚಿನ ಮಾಹಿತಿ :

1) ಆದಾಯ ತೆರಿಗೆ ಕಾಯ್ದೆ ಸೆಕ್ಷನ್ 32ರ ಪ್ರಕಾರ ಸವಕಳಿ ರೂ. 3,50,000.
2) ಮಾರಾಟ ತೆರಿಗೆ ತಾತ್ಕಾಲಿಕ ನಿಧಿಯಿಂದ ಹಿಂದಿನ ವರ್ಷ 2019 – 20ರಲ್ಲಿ ರೂ. 40,000ವನ್ನು ಪಾವತಿಸಲಾಗಿದೆ.
3) ಹಿಂದಿನ ವರ್ಷಗಳಿಂದ ತಂದ ವ್ಯವಹಾರದ ನಷ್ಟ ಮತ್ತು ಹೊಂದಿಸಲಾಗದ ಸವಕಳಿ.

	ಆದಾಯ ಕಾಯ್ದೆ ಪ್ರಕಾರ ರೂ.	ಪುಸ್ತಕದ ಪ್ರಕಾರ ರೂ.
ಹಿಂದಿನ ವರ್ಷಗಳಿಂದ ತಂದ ವ್ಯವಹಾರದ ನಷ್ಟಗಳು	2,00,000	2,25,000
ಹೊಂದಿಸಲಾಗದ ಸವಕಳಿ	3,50,000	4,25,000

ಕಂಡುಹಿಡಿಯಿರಿ :

1) ಆದಾಯ ತೆರಿಗೆ ಕಾಯ್ದೆಯ ನಿಯಮಾವಳಿಗಳ ಪ್ರಕಾರ ಒಟ್ಟು ತೆರಿಗೆಯ ಜವಾಬ್ದಾರಿ.
2) ಸೆಕ್ಷನ್ 115 JB ಪ್ರಕಾರ ಪುಸ್ತಕದ ಲಾಭ ಮತ್ತು ತೆರಿಗೆ ಜವಾಬ್ದಾರಿ.
3) ಅಂತಿಮ ತೆರಿಗೆ ಜವಾಬ್ದಾರಿ.